ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ : ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/2021-22/ಸಿವೈಎಸ್-328 ದಿನಾಂಕ: 28 MAY 2021

## ಸುತ್ತೋಲೆ

ವಿಷಯ: ಕೋವಿಡ್-19 ವೈರಾಣುವಿನ ಸೋಂಕಿಗೆ ಒಳಗಾಗಿರುವ ಅಧಿಕಾರಿ/ನೌಕರರು ವಿಶೇಷ ಸಾಂಧರ್ಭಿಕ ರಜೆಯ ನಂತರ ಕಛೇರಿಗೆ ಹಾಜರಾಗಲು ಕೈಗೊಳ್ಳುವ ಕ್ರಮಗಳ ಬಗ್ಗೆ.

ಉಲ್ಲೇಖ: 1. ಕವಿಪ್ರನಿನಿ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/9457/2019-20 ಬೆಂಗಳೂರು ದಿನಾಂಕ: 20.08.2020.

2. ಈ ಕಛೇರಿ ಮೆಮೋ ಸಂಖ್ಯೆ: ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/2020-21/ಸಿವೈಎಸ್-717 ದಿನಾಂಕ:04.09.2020.

*****

ಕೋವಿಡ್-19 ವೈರಾಣುವಿನ ಸೋಂಕಿಗೆ ಒಳಗಾಗಿ ಮನೆಯಲ್ಲಿಯೇ ಪ್ರತ್ಯೇಕತೆಯಲ್ಲಿ ಇರಲು ತಿಳಿಸಲಾಗಿರುವ ಅಧಿಕಾರಿ/ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಿ ಹೊರಡಿಸಲಾಗಿರುವ ಉಲ್ಲೇಖ(1)ರ ಕವಿಪ್ರನಿನಿ ಆದೇಶವನ್ನು ಉಲ್ಲೇಖ(2)ರಲ್ಲಿ ಚಾವಿಸನಿನಿಯಲ್ಲಿ ಅಳವಡಿಸಿಕೊಂಡು 14 ದಿನಗಳ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಿ ಆದೇಶ ಹೊರಡಿಸಲಾಗಿರುತ್ತದೆ.

ಉಲ್ಲೇಖ(2)ರ ಆದೇಶದನ್ವಯ 14 ದಿನಗಳ ವಿಶೇಷ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಂಡ ನಂತರ ಸಹ ಹಲವು ಅಧಿಕಾರಿ/ನೌಕರರು ಕರ್ತವ್ಯಕ್ಕೆ ಹಾಜರಾಗದೆ ಇರುವುದು ನಿಗಮ ಕಛೇರಿಯ ಗಮನಕ್ಕೆ ಬಂದಿರುತ್ತದೆ. ವಿಶೇಷ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಂಡ ನಂತರ ಸಹ ಯಾವುದೇ ಅಧಿಕಾರಿ/ನೌಕರರು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, 14 ದಿನಗಳ ವಿಶೇಷ ಸಾಂದರ್ಭಿಕ ರಜೆಯ ನಂತರದ ದಿನದಿಂದ ಕರ್ತವ್ಯಕ್ಕೆ ಹಾಜರಾಗುವ ದಿನದವರೆಗಿನ ಅವಧಿಯನ್ನು ಅಂತಹ ಅಧಿಕಾರಿ/ನೌಕರರನ್ನು ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ ನಿಯಮಾನುಸಾರ ಕ್ರಮವಹಿಸುವುದು. ಆದರೆ ಬಲವಾದ ವೈದ್ಯಕೀಯ ಕಾರಣ/ಶಿಫಾರಸ್ಸುಗಳು ವೈದ್ಯರಿಂದ ದೃಢೀಕರಿಸಿ ನೀಡಿದ್ದಲ್ಲಿ ಪ್ರತಿಯೊಂದು ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ರಜೆ ಮಂಜೂರು ಮಾಡಬಹುದು. ಇಲ್ಲವಾದಲ್ಲಿ ಗೈರು ಹಾಜರಿ ಎಂದೇ ಪರಿಗಣಿಸಿ ಶಿಸ್ತು ಕ್ರಮ ಕೈಗೊಳ್ಳುವುದು.

ಕೋವಿಡ್-19 ವೈರಾಣುವಿನ ಸೋಂಕಿಗೆ ಒಳಗಾಗಿ ಮನೆಯಲ್ಲಿಯೇ ಪ್ರತ್ಯೇಕತೆಯಲ್ಲಿದ್ದು, ವಿಶೇಷ ಸಾಂದರ್ಭಿಕ ರಜೆ ಬಳಸಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗುವ ಅಧಿಕಾರಿ/ನೌಕರರಿಂದ ಫಿಟ್‌ನೆಸ್ ಸರ್ಟಿಫಿಕೇಟ್‌ಗಳನ್ನು ಕಡ್ಡಾಯವಾಗಿ ಪಡೆದು ಪಾಸಿಟಿವ್ ಆಗಿರುವ ದಿನದಿಂದ ವಿಶೇಷ ಸಾಂದರ್ಭಿಕ ರಜೆಯನ್ನು ಲೆಕ್ಕ ಹಾಕಿ ಪರಿಶೀಲಿಸಿದ ನಂತರವೇ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಸದರಿ ಅಧಿಕಾರಿ/ನೌಕರರ ವೇತನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿರುತ್ತದೆ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು.

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು/ಹಾಸನ ಇವರ ಅವಗಾಹನೆಗಾಗಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
3. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ, ಮೈಸೂರು/ ಚಾಮರಾಜನಗರ-ಕೊಡಗು/ ಹಾಸನ/ಮಂಡ್ಯ ಇವರ ಮಾಹಿತಿಗಾಗಿ.
4. ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ, ಮೈಸೂರು/ ಚಾಮರಾಜನಗರ-ಕೊಡಗು/ ಹಾಸನ/ಮಂಡ್ಯ ರವರ ಮಾಹಿತಿಗಾಗಿ.
5. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ
7. ಎಲ್ಲಾ ಲೆಕ್ಕಾಧಿಕಾರಿ/ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯ ದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
9. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ,) ನಿಗಮ ಕಛೇರಿ, ನಿಗಮದ ವೆಬ್‌ಸೆಟ್ ನಲ್ಲಿ ಪ್ರಕಟಿಸಲು.
10. ಸಪ್ರವ್ಯ-1 & ಸಪ್ರವ್ಯ-2/ವ್ಯ-1/ಪ್ರ.ಕ.